ಕೆನರಾ
ವೆಲ್‌ಫೇರ್ ಟ್ರಸ್ಟ್
सा विद्या या विमुक्तये

# ದಿನಕರ ಕಲಾನಿಕೇತನ ಸಂಗೀತ ವಿದ್ಯಾಲಯ, ಕಾರವಾರ

## ವಾರ್ಷಿಕ ಸಂಗೀತ ಸಮಾರಂಭ



ರವಿವಾರ, 17ನೇ ಜನವರಿ 2016
ಸ್ಥಳ: ಹಿಂದು ಹೈ ಸ್ಕೂಲ ಸಭಾಭವನ, ಕಾರವಾರ

## ಒಂದು ವರದಿ

# ಕೆನರಾ ವೆಲ್‌ಫೇರ್ ಟ್ರಸ್ಟ

## ದಿನಕರ ಕಲಾನಿಕೇತನ ಸಂಗೀತ ವಿದ್ಯಾಲಯ, ಕಾರವಾರ

### ವಾರ್ಷಿಕ ಸಂಗೀತ ಸಮಾರಂಭ

ದಿನಾಂಕ 17 ಜನವರಿ 2016 ರಂದು ಸಮಯ ಮಧ್ಯಾಹ್ನ 3.00 ಘಂಟೆಯಿಂದ ಕಾರವಾರದ ಹಿಂದು ಪ್ರೌಢಶಾಲಾ ಸಭಾಭವನದಲ್ಲಿ ದಿನಕರ ಕಲಾನಿಕೇತನ ಸಂಗೀತ ಶಾಲೆಯ ವಾರ್ಷಿಕ ಸಂಗೀತ ಕಾರ್ಯಕ್ರಮವು ಅತ್ಯಂತ ಸುಂದರವಾಗಿ ನಡೆಯಿತು.




ಮೊದಲಿಗೆ ಮಧ್ಯಾಹ್ನ 3.00 ಘಂಟೆಯಿಂದ ಸುಮಾರು 3 ತಾಸುಗಳ ಕಾಲ ಶಾಲೆಯ ವಿದ್ಯಾರ್ಥಿಗಳಿಂದ ಭಕ್ತಿಗೀತೆ, ಭಾವಗೀತೆ, ದೇಶಭಕ್ತಿಗೀತೆ, ರಾಗಗಳು (ಶಾಸ್ತ್ರೀಯ ಸಂಗೀತ) ಹಾರ್ಮೋನಿಯಂ ವಾದನ, ತಬಲಾ ವಾದನ ಇವೆಲ್ಲ ಕಾರ್ಯಕ್ರಮಗಳು ಪ್ರೇಕ್ಷಕರ ಕಣ್ಮನ ತಣಿಸಿತು.

ಎರಡನೆಯದಾಗಿ, ಸಭಾ ಕಾರ್ಯಕ್ರಮ ಸಭೆಯ ಉದ್ಘಾಟಕರಾಗಿ ಪ್ರೊ. ಎಸ್.ಶಂಭು ಭಟ್, ಕಡತೋಕ, ಹೊನ್ನಾವರ ಇವರು ಮಾತನಾಡಿ ಸಂಗೀತ ಬೆಳೆದು ಬಂದ ರೀತಿ, ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಧ್ಯಕ್ಷರಾಗಿ ಶ್ರೀಯುತ ಎಸ್.ಪಿ.ಕಾಮತ, ಕೆನರಾ ವೆಲ್‌ಫೇರ್ ಟ್ರಸ್ಟ್, ಅಧಕ್ಷರು ಇವರು ಮಾತನಾಡಿ ಸಂಗೀತ ಒಂದು ತಪಸ್ಸು. ಹಾಡುಗಾರಿಕೆಯ ಜೊತೆಗೆ ಭಾವನೆ ಮುಖ್ಯ ಎಂದರು. ಸಂಗೀತ ಶಾಲೆಯ ಬೆಳವಣಿಗೆ ಅಚ್ಚುಕಟ್ಟುತನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅತಿಥಿಗಳಾಗಿ ಡಾ. ಶ್ರೀಮತಿ ಸಂಪದಾ ಭಟ್ಟ ಮಾತನಾಡಿ ಕಾರ್ಯಕ್ರಮದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.









ನಂತರ ವಿಶೇಷ ಆಮಂತ್ರಿತ ಕಲಾವಿದರಾದ ಡಾ. ಶ್ರೀಮತಿ ಸಂಪದಾ ಭಟ್ಟ, ಬೆಂಗಳೂರು ಇವರ ಗಾಯನ ಆರಂಭದಲ್ಲಿ ಪುರಿಯಾಧನಶ್ರೀ, ಜೋಗರಾಗ, ಭೈರವಿರಾಗವನ್ನು ಹಾಡಿ ಜನರನ್ನು ಮಂತ್ರ ಮುಗ್ದರನ್ನಾಗಿಸಿದರು. ಇವರಿಗೆ ಶಿಕ್ಷಕರಾದ ಶ್ರೀ ಮಾರುತಿ ನಾಯ್ಕ ಇಡಗುಂಜಿ ಹೊನ್ನಾವರ ಇವರು ಸಂವಾದಿನಿಯಲ್ಲಿ ಶ್ರೀ ಗಣಪಟಿ ಹೆಗಡೆ, ಹರಿಕೇರಿ ಹೊನ್ನಾವರ ಇವರು ತಬಲಾದಲ್ಲಿ ಸಹಕರಿಸಿದರು. ಕುಮಾರ ರಾಜೇಶ ಪ್ರಭು, ಕತಗಾಲ ಇವರು ತಬಲಾದಲ್ಲಿ ಸಹಕಲಾವಿದರಾಗಿ ಸಹಕರಿಸಿದರು.







ಕುಮಾರಿ ಸಾಯಿಶ್ರೀ ಎಸ್. ಶೇಟ ಪ್ರಾರ್ಥಿಸಿದಳು. ಶ್ರೀಯುತ ಸಂತೋಷ ಶೇಟ ಸ್ವಾಗತಿಸಿದರು. ಶ್ರೀಮತಿ ಅನು ಕಳಸ ವರದಿ ವಾಚಿಸಿದರು. ಶ್ರೀ ಜಂಪಣ್ಣ ಆಶಿಹಾಳ ವಂದಿಸಿದರು. ಶ್ರೀಮತಿ ಪ್ರೇಮಾ ಟಿ. ಎಮ್. ಆರ್. ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ಸುಮಾರು 6 ತಾಸುಗಳ ಕಾರ್ಯಕ್ರಮ ಸುಂದರವಾಗಿ ಮೂಡಿಬಂತು.